# ಒಂದು ನಿಸ್ತಂತುವಿನೆಳೆ

ಇತ್ತ ರಣಗುಡುತಿರುವ
ಹಸಿ ಗಾಯದಿಂದ
ಒಸರುತ್ತಿರುವ ರಕ್ತ
ಅವರೆದೆಯವರೆಗೆ
ಮುಟ್ಟಿಸಲು
ಒಂದು ನದಿಯ
ಮಾಡು ನನ್ನ
ಹರಿವು ನಿಲ್ಲಿಸುವುದಿಲ್ಲ.

ಇವರ ಸುಟ್ಟ ಕರುಳಿನ ಆಕ್ರಂದನ
ಅವರ ಕರುಳು ತಾಗಿಸಲು
ಒಂದೇ ಒಂದು
ಗಾಳಿಯಲೆಯ
ಮಾಡು ನನ್ನ
ಹಾಡು ನಿಲ್ಲಿಸುವುದಿಲ್ಲ.

ಖಂಡಾಂತರಗಳಾಚೆಯ
ಹಕ್ಕಿಯಾರ್ತ ಸ್ವರ
ಕೇಳಿಸುತ್ತದಂತೆ
ಭೂಮಿಯೀಚೆಗಿನ
ಪಕ್ಷಿಗಳಿಗೆ...

ಅಲ್ಲೆಲ್ಲೋ ಯಾವುದೋ
ಮಿಂಚುಳ್ಳಿ ನೋವಲ್ಲಿ ನರಳಿದರೆ
ಇಲ್ಲಿ ಮಿಡುಕುತ್ತದಂತೆ
ಚುಕ್ಕಿಮುನಿಯ.
ಕವಿತೆ ತಲುಪಿದಂತೆ
ಎದೆಯಿಂದ ಎದೆಗೆ.

ಹೀಗೇ... ಆ ಜೀವದುಸಿರಿಂದ
ಈ ಜೀವ ಧಮನಿವರೆಗೆ...
ಮಾಡು ನನ್ನ
ಒಂದು ನಿಸ್ತಂತುವಿನೆಳೆ.

● ರೂಪ ಹಾಸನ
ಕಲೆ: ಡಿ.ಕೆ. ರಮೇಶ್

